ಸಂಯಮಕ್ಕೆ, ಪರಿಪೂರ್ಣತೆಗೆ ಹೆಣ್ಣನ್ನು ರೂಪಕವಾಗಿ ಬಳಸುವ ನಾವು ಸಮಾಜದ ವಾಸ್ತುಶಿಲ್ಪಿಗಳಾಗಿ ಪ್ರತಿಕ್ಷಣ ದುಡಿಯುವ ಮತ್ತು ತುಡಿಯುವ ಸ್ತ್ರೀಗುಣವನ್ನು ಮರೆತೇಬಿಡುತ್ತೇವೆ. ಫಾರ್ಚೂನ್ 500 ಕಂಪನಿಗಳಿಂದ ತೊಡಗಿ ರಾಷ್ಟ್ರಗಳ ನೇತೃತ್ವ ವಹಿಸಿರುವ ಮಹಿಳೆಯರ ಬಗ್ಗೆ ವಾಚಾಳಿಗಳಾಗುವ ಹೊತ್ತಿನಲ್ಲಿ ನಮ್ಮ ಸುತ್ತಲೇ ಇದ್ದುಕೊಂಡು ವಿಶಿಷ್ಟ ಸಾಧನೆ ಮಾಡಿದ ಮಹಿಳೆಯರನ್ನು ಗಮನಿಸುವುದೇ ಇಲ್ಲ. ಅವರು ಎದುರಿಸಬೇಕಾದ ಅಡೆತಡೆಗಳು ಗಂಡು ಮನಸ್ಸಿಗೆ ಊಹಿಸುವುದೂ ಅಸಾಧ್ಯ. 2018ರಲ್ಲಿ ತಮ್ಮ ಸಾಧನೆಗಳ ಮೂಲಕವೇ ಹೆಸರು ಮಾಡಿದ ಕರ್ನಾಟಕದ ಮಹಿಳೆಯರ ಪರಿಚಯ ಇಲ್ಲಿದೆ. ವಿಜ್ಞಾನ, ಉದ್ಯಮ, ಕಲೆ, ಸಿನಿಮಾ, ಸಮಾಜಕಾರ್ಯ ಹೀಗೆ ಹಲವು ಕ್ಷೇತ್ರಗಳಲ್ಲಿ ವಿಶಿಷ್ಟ ಹೆಜ್ಜೆಗಳನ್ನಿಟ್ಟಿರುವ ಈ ಸಾಧಕಿಯರೆಲ್ಲರೂ ಬದುಕಿನ ಒಂದು ವಿಶಿಷ್ಟ ತಿರುವಿನಲ್ಲಿ ಸಾಧನೆಯತ್ತ ಹೊರಳಿದವರು. ಅದರ ಮೂಲಕ ತಮ್ಮ ಬದುಕಿನ ಜೊತೆಗೆ ಸುತ್ತಮುತ್ತಲಿನ ಬದುಕುಗಳನ್ನು ಹಸನುಗೊಳಿಸಿದವರು. ಇವರಾರೂ ಗುರಿತಲುಪಿಬಿಟ್ಟೆವೆಂದು ವಿಶ್ರಾಂತಿಗೆಳೆಸಿದವರಲ್ಲ. ಇನ್ನಷ್ಟು ಬೆಳೆಯುವ ಮತ್ತಷ್ಟು ವಿಸ್ತಾರಗೊಳ್ಳುವ ತಮ್ಮ ಕನಸುಗಳ ಜೊತೆಗೆ ಮುಂದಿನ ವರ್ಷಕ್ಕೆ ಅಡಿಯಿಡುತ್ತಿರುವವರು. ಸಮಾಜದಲ್ಲಿ ಭರವಸೆಯ ಬೀಜಗಳನ್ನು ಬಿತ್ತುತ್ತಿರುವ ಈ ಮಹಿಳಾ ಮಾದರಿಗಳನ್ನು 'ಸುಧಾ' ಅಭಿಮಾನದಿಂದ ಓದುಗರ ಮುಂದಿಡುತ್ತಿದೆ.





# ಹೆಮ್ಮೆಯ ಕನ್ನಡತಿಯರು 2019 ಹೆಣ್ಮಕ್ಳೆ ಸ್ಟ್ರಾಂಗು